ಇನ್ನು ಅಕ್ಟೋಬರ್ ತಿಂಗಳಿನಲ್ಲಿ ರಾಜ್ಯದ ಜಿಲ್ಲೆಗಳಾದ ರಾಯಚೂರು, ಧಾರವಾಡ, ಬೆಳಗಾಂ, ಬಳ್ಳಾರಿ, ಗುಲ್ಬರ್ಗಾ, ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಭಾರಿ ಮಳೆಯಿಂದಾಗಿ ಕೆಲಸ ವಾಗಲಿಲ್ಲ. ಇದರಿಂದ ಉತ್ಪತ್ತಿ ಸಾಕಷ್ಟು ಕಡಿಮೆ ಆಗುವುದಕ್ಕೆ ಕಾರಣ ಆಯಿತು. ಎರಡನೆಯದಾಗಿ ಜೂನ್, ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ತಲೆದೋರಿದಂತಹ ದೀರ್ಘಕಾಲದ ಒಣಹವೆ, ಮೂರನೆಯದು ನೈರುತ್ಯದ ಅಸಮರ್ಪಕ ನಡವಳಿಕೆಯಿಂದ ಆಗಿರುವಂತಹ ತೊಂದರೆಗಳು, ಇಂತಹ ತೊಂದರೆಗಳು ಮನುಷ್ಯನಿಂದ ನಿರ್ಮಾಣವಾದಂತಹ ತೊಂದರೆಗಳಲ್ಲ. ಇದು ವೈವಿಕವಾಗಿ ಬಂದಂತಹ ತೊಂದರೆಗಳು. ಇದರಿಂದ ಅಡ್ಡಿಯಾಗಿದೆ ಎಂಬುದು ಉತ್ತರದಲ್ಲಿ ಸ್ಪಷ್ಟವಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಕೇಳಿದ್ದುದು ಇಳುವರಿ ಕಡಿಮೆಯಾಗುವುದಕ್ಕೆ ಪ್ರಕೃತಿಯಷ್ಟನ್ನೇ ದೂಷಿಸಿದ್ದೀರಿ. ಮನುಷ್ಯ ನಿರ್ಮಾಣ ದೋಷಗಳಿವೆಯಲ್ಲಾ, ಗೊಬ್ಬರದ ಬೆಲೆ ಏರಿಕೆ, ದೋಷ ಪೂರಿತವಾದಂತಹ ಬೀಜ, ಕೀಟನಾಶಕ, ಇವುಗಳಿಂದಲೂ ಇಳುವರಿ ಕಡಿಮೆ ಆಗಿದೆ ಎನ್ನತಕ್ಕದ್ದು; ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರು ತಿಳಿಸಿದ ಹಾಗೆ ಇದು ಅಧಿಕಾರಿಗಳಿಂದ ಆಗಿಲ್ಲ, ಗೊಬ್ಬರದ ಬೆಲೆ ಏರಿಕೆ ಅದಕ್ಕೆ ಕಾರಣ ನಾವಲ್ಲ, ಕೇಂದ್ರ ಸರ್ಕಾರ ಗೊತ್ತು ಮಾಡಿರುವಂತಹ ಬೆಲೆಗೆ ನಾವು ಮಾರಬೇಕಾಗುತ್ತದೆ. ಇನ್ನು ಸಾಕಷ್ಟು ನೀರಿನ ಅನುಕೂಲ ಇಲ್ಲದೇ ತೊಂದರೆಯಾಗಿದೆ. ಇಂತಹ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿದೆ. ಇಂತಹ ತೊಂದರೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯ ಎನ್ನುವುದನ್ನು ಗಣನೆಗೆ ತೆಗೆದುಕೊಂಡು ನಮ್ಮ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಇದರಲ್ಲಿ 1992-93ನೇ ಸಾಲನಲ್ಲಿ ನಾವು ಏನು ಗುರಿ ಇಟ್ಟುಕೊಂಡಿದ್ದೆವೂ ಅದಕ್ಕಿಂತಲೂ ಹೆಚ್ಚಾಗಿ ಅಂದರೆ 4 ಲಕ್ಷ ಎಕರೆ ಭತ್ತ ಮುಂಗಾರು ಬೆಳೆಯಾಗಿದೆ. ಯಾವ ವರ್ಷದಲ್ಲೂ ಇಷ್ಟು ಹೆಚ್ಚಾಗಲಿಲ್ಲ; ಎಂಬುದು ಅಂಕಿಅಂಶಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಗ್ರಾಮಪಂಚಾಯತಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಮೀಸಲಾತಿ ನೀತಿ.

111-ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಗ್ರಾ.ಅ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗ್ರಾಮ ಪಂಚಾಯತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಮೀಸಲಾತಿಗಳ ಬಗ್ಗೆ ಸರ್ಕಾರದ ನಿಲುವೇನು;

ಆ) ಈಗಿರುವ ಸರ್ಕಾರಿ ಆಜ್ಞೆಯನ್ನು ಬದಲಾವಣೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೆ ;

ಇ) ಹಾಗಿದ್ದಲ್ಲಿ ಯಾವ ರೀತಿಯಲ್ಲಿ ಬದಲಾವಣೆ ಮಾಡಲಾಗುವುದು;

ಈ) ಗ್ರಾಮ ಪಂಚಾಯತ್ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು);

ಅ) 73ನೇ ಸಂವಿಧಾನ ತಿದ್ದುಪಡಿ ಕಾಯಿದೆಗೆ ಅನುಗುಣವಾಗಿ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಪ್ರಕರಣ 44(2)ರಲ್ಲಿ ಹೇಳಿರುವಂತೆ ವಿವಿಧ ವರ್ಗಗಳಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗೆ ಮೀಸಲಾತಿ ನೀಡಲಾಗುವುದು.

ಆ) ದಿನಾಂಕ : 21-12-1993ರ ಸರ್ಕಾರದ ಆದೇಶ ಮಾರ್ಪಾಟುಗೊಳಿಸಿ ದಿನಾಂಕ : 2-2-1994ರಂದು ಆದೇಶ ಹೊರಡಿಸಿದೆ.

ಇ) ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಚುನಾಯಿತ ಸದಸ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರುವ ಗ್ರಾಮ

ಪಂಚಾಯತ್ಗಳನ್ನು ಆಯಾಯ ವರ್ಗಗಳಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ಮಿಸಲಿಡಲಾಗುವುದು.

ಈ) 25-2-94 ರಿಂದ 7-3-1994 ರೊಳಗೆ ಚುನಾವಣೆಗಳನ್ನು ನಡೆಸಲಾಗುವುದು.

ಶ್ರೀ ಆರ್.ವಿ. ದೇಶಪಾಂಡೆ : (ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಪರವಾಗಿ) ಪಂಚಾಯತ್ ಚುನಾವಣೆಯಲ್ಲಿ ಆರಿಸಿಬಂದ ಸದಸ್ಯರಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಇವರ ಚುನಾವಣೆ ಆಗಬೇಕಾಗಿದೆ. ಸರ್ಕಾರ ಈಗಾಗಲೇ 21-12-93ರಂದು ಒಂದು ಆದೇಶ ಮಾಡಿದರು. ಅದರಲ್ಲಿ ಬದಲಾವಣೆ ಮಾಡಿ ಹೊಸ ಆಜ್ಞೆಯನ್ನು 2-2-94 ಮಾಡಿದ್ದಾರೆ. ಮೂರನೆ ಪ್ರಶ್ನೆಗೆ ಉತ್ತರ ಕೊಡುವಾಗ ಯಾವ ಪಂಚಾಯತ್ನಲ್ಲಿ ಪರಿಶಿಷ್ಟ ಜಾತಿಯ ಜನರು ಮತ್ತು ಅನುಸೂಚಿತ ಜನರು ಹೆಚ್ಚು ಇದ್ದಾರೆ, ಅಲ್ಲಿ ನಾವು ಅಧ್ಯಕ್ಷ, ಉಪಾಧ್ಯಕ್ಷರರನ್ನು ಮಾಡಬೇಕೆಂದು ಆದೇಶವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಾನು ನೇರವಾಗಿ ಮಾನ್ಯ ಸಚಿವರನ್ನು ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಹೊನ್ನಾಳಿ ಕ್ಷೇತ್ರದಲ್ಲಿ 20 ಗ್ರಾಮಪಂಚಾಯತಿ ಇದ್ದು 6 ಗ್ರಾಮ ಪಂಚಾಯತಿಗಳಲ್ಲಿ ಎರಡೆರಡೆ ಎಸ್.ಸಿ. ಮೆಂಬರ್ಗಳು ಅಥವಾ ಒಬ್ಬರೇ ಒಬ್ಬರು ಎಸ್.ಸಿ. ಮೆಂಬರ್ ಇರುತ್ತಾರೆ. ಆ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಏನು ಮಾಡಬೇಕು? ಅದರ ಅರ್ಥ ಡಿಸ್ಟ್ರಷನ್ ಇಲ್ಲ. ಡಿಸ್ಟ್ರಿಷನ್ ಇದ್ದರೆ ನಿಮ್ಮ ಪಕ್ಷದ ಶಾಸಕರಿಗೆ ಸಹಾಯ ಮಾಡುವುದಕ್ಕೆ ಅವರು ಹೇಳಿದ ಹಾಗೆ ಅಧ್ಯಕ್ಷರು ಉಪಾಧ್ಯಕ್ಷರ ಮೀಸಲಾತಿಯನ್ನು ಡಿ.ಸಿ.ಯವರು ಮಾಡಬೇಕು ಆ ಉದ್ದೇಶದಿಂದ ಏನಾದರೂ ಆರ್ಡರ್ ಮಾಡಿದ್ದಿರೋ ಹೇಗೆ?

ಶ್ರೀ ಎಂ.ವೈ. ಘೋರ್ಪಡೆ : ನಮ್ಮ ಉದ್ದೇಶ ಇದರಲ್ಲಿ ಬಹಳ ಸ್ವಚ್ಛವಾಗಿದೆ, ಹಾಗೂ ಸ್ಪಷ್ಟವಾಗಿದೆ. 25ನೇ ತಾರೀಖು ನಾವು ಕೊಟ್ಟಿರತಕ್ಕಂತಹ ಆದೇಶದಲ್ಲಿ ರೋಸ್ಟರ್ ಪ್ರಕಾರ ಯಾವ್ಯಾವ ತಾಲ್ಲೂಕಿಗೆ ಎಷ್ಟೆಷ್ಟು ಅಧ್ಯಕ್ಷರ ಮೀಸಲಾತಿ ಬರುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಉದಾಹರಣೆಗೆ ಒಂದು ತಾಲ್ಲೂಕಿನಲ್ಲಿ ಒಂದು 30 ಪಂಚಾಯಿತಿಗಳು ಇದ್ದರೆ ಅದರಲ್ಲಿ ಒಂದು ನಾಲ್ಕು ಎಸ್ಸಿ ಬಂದಿರಬಹುದು, 2 ಎಸ್ಟಿ, 10 ಒಬಿಸಿ ಬಂದಿರುತ್ತದೆ. ಹೀಗಾಗಿ ರೋಸ್ಟರ್ ಪದ್ಧತಿ ಪ್ರಕಾರ ನಾವು ಈಗಾಗಲೇ ತಿಳಿಸಿದ್ದೇವೆ. ಆದರೆ ತಾಲ್ಲೂಕು ಮಟ್ಟದಲ್ಲಿ ಆ ತಾಲ್ಲೂಕಿಗೆ ಬಂದಿರತಕ್ಕಂತಹ ಅಧ್ಯಕ್ಷರ ಮೀಸಲಾತಿ ಯಾವ ಪಂಚಾಯತಿಗಳಿಗೆ ಅನ್ವಯಿಸುತ್ತದೋ, ಇದರ ಬಗ್ಗೆ ಸ್ವಲ್ಪ ಇಲ್ಲಿ ಅಲ್ಲಿ ತೊಂದರೆ ಉಂಟಾಗಿದೆ ಎಂದು ಕೇಳಿ ಬಂದಿತು. ಉದಾಹರಣೆಗಾಗಿ ಎಲ್ಲಿ ಒಂದೆರಡು ಕಡೆ ಎಸ್ಟಿ ಮೆಂಬರ್ಸ್ ಇರುವುದಿಲ್ಲ ಅಂತಹ ಕಡೆ ಛೇರ್ ಪರೆಸನ್ ರಿಸರ್ವೇಷನ್ ಬಂದರೆ ಪ್ರಾಕ್ಟಿಕಲ್ಲಾಗಿ ತೊಂದರೆ ಉಂಟಾಗಬಹುದು. ಇದು ಆಶ್ಚರ್ಯ ಪಡಬೇಕಾದ ಮಾತಲ್ಲ. ಏಕೆಂದರೆ ಈ ದೇಶದ ರಾಜಕೀಯ ಇತಿಹಾಸದಲ್ಲಿ ಪ್ರಥಮವಾಗಿ ನಾವು ಅಧ್ಯಕ್ಷರ ಉಪಾಧ್ಯಕ್ಷರ ಸ್ಥಾನಕ್ಕೆ ಈ ರೀತಿಯ ಮೀಸಲಾತಿ ಕೊಡುವಾಗ ಪ್ರಾಕ್ಟಿಕಲ್ಲಾಗಿ ಈ ರೀತಿ ಕಷ್ಟಗಳು ಬರಬಹುದು, ಬರಲಿಕ್ಕೆ ಸಾಧ್ಯವಿಲ್ಲ ಎಂದು ನಾನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಕೂಡ ಆದಷ್ಟು ಮಟ್ಟಿಗೆ ಬಗೆಹರಿಸುವ ದೃಷ್ಟಿಯಿಂದ ಮತ್ತೆ 2ನೇ ಫೆಬ್ರವರಿಯಲ್ಲಿ ನಾವು ತಾಲ್ಲೂಕ್ ಗೈಡ್ಲೈನ್ಸ್ ಕೊಟ್ಟಿದ್ದೇವೆ. ತಾಲ್ಲೂಕ್ ಗೈಡ್ಲೈನ್ಸ್ನಲ್ಲಿ ಆ ತಾಲ್ಲೂಕು ಮಟ್ಟದಲ್ಲಿ ಯಾವ ಪಂಚಾಯಿತಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಎಸ್ಸಿ ಬಂದಿರುತ್ತಾರೋ ಆ ಪಂಚಾಯಿತಿಗೆ ಎಸ್ಸಿ ಅಧ್ಯಕ್ಷರ ಮೀಸಲಾತಿಯನ್ನು ಅನುಸರಿಸಿ, ತಾಲ್ಲೂಕಿನಲ್ಲಿ ಯಾವ್ಯಾವ ಪಂಚಾಯತಿಯಲ್ಲಿ ಹೆಚ್ಚಿನ ಸಂಖ್ಯೆ ಎಸ್ಟಿ ಬಂದಿರುತ್ತಾರೋ ಅಂತಹ ಪಂಚಾಯತಿಗೆ ಛೇರ್ ಪರಸನ್ಸ್ ಮೀಸಲಾತಿಗಳನ್ನು ಅನುಸರಿಸಿ ಎಂದು ಹೇಳಿದ್ದೇವೆ, ಇದನ್ನು ಹೇಳುವ ಉದ್ದೇಶವೇನೆಂದರೆ ಈ ಒಂದು ವಾದ ಏನು ಇದೆ, ಕೆಲವು ಕಡೆ ಎಸ್ಟಿನೇ ಇಲ್ಲ ಅಂತ ಅಂತಹ ಕಡೆ ಅಧ್ಯಕ್ಷರ ರಿಸರ್ವೇಷನ್ ಬಂದುಬಿಟ್ಟಿದೆ

ಅಂದಾಗ ಇದನ್ನು ತಪ್ಪಿಸುವುದಕ್ಕೋಸ್ಕರ, ಮಾಡಿದ್ದೇವೆ. ಈ ಆದೇಶದಲ್ಲಿ ಏನು ಇದೆ ಇಲ್ಲಿ ಮೆಂಬರ್ ಸಂಖ್ಯೆ ಬರುವುದಿಲ್ಲ. ಆದರೆ ತಮಗೆಲ್ಲಾ ಗೊತ್ತಿರುವ ಹಾಗೆ ಈಗ ಕೆಲವು ಕಡೆ ಸರಿಸಮಾನವಾಗಿ ಬಂದಿದ್ದಾರೆ. ಈಗ ನಾಲ್ಕು ಪಂಚಾಯತಿಯಲ್ಲಿ ನಾವು ಎಸ್ಸಿ ರಿಸರ್ವೇಷನ್ ಮಾಡುವುದಕ್ಕೆ ಹೋದರೆ ಒಂದು, ಎರಡು, ಮೂರು, ನಾಲ್ಕು ಈ ನಾಲ್ಕನೇ ರಿಸರ್ವೇಷನ್ ಮಾಡುವಾಗ ಇನ್ನು ಒಂದಲ್ಲ 4-5-6 ಪಂಚಾಯತಿಗಳಲ್ಲಿ ತಾವು ಹೇಳಿದ ಹಾಗೆ ಅಷ್ಟೇ ಮೆಂಬರ್ಸ್ ಎಸ್ಸಿ ಪಂಗಡಕ್ಕೆ ಸೇರಿದವರು ಬಂದಿದ್ದರೆ, ಆಗ ಈ ಡಿಸಿ ಏನು ಮಾಡಬೇಕು ಎನ್ನುವ ಪ್ರಶ್ನೆ ಬರುತ್ತದೆ. ಅದಕ್ಕೂ ನಾವು ಈ ಗೈಡ್‌ಲೈನ್ ಕೊಟ್ಟಿದ್ದೇವೆ. ಈ 5-6 ಸರಿಸಮಾನವಾಗಿ ಮೆಂಬರ್ಸ್ ಇರತಕ್ಕಂತಹ ಪಂಚಾಯಿತಿಗಳಲ್ಲಿ ಯಾವುದನ್ನು ಆರಿಸಿಕೊಳ್ಳಬೇಕು, ಇದಕ್ಕೂ ಕೂಡ ಒಂದು ಸ್ಪೆಷಲ್ ಡಿಸ್ಪಬ್ಯೂಷನ್ ಗಮನದಲ್ಲಿ ಇಟ್ಟುಕೊಂಡು ಮಾಡಿ. ಅಂದರೆ ಏನು ಒಂದೇ ಕಡೆ ಬಂಚಿಂಗ್ ಮಾಡುವುದನ್ನು ತಪ್ಪಿಸಿ, ಅದನ್ನು ಒಂದು ಕನ್ಸಿಡರೇಷನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಸ್ಥಳೀಯ ಶಾಸಕರು ಅಷ್ಟೇ ಅಲ್ಲ, ಎಲ್ಲಾ ಪಕ್ಷಕ್ಕೂ ಸೇರಿರತಕ್ಕಂತಹ ಜನಕ್ಕೆ ಕನ್‌ಸಲ್ಟ್ ಮಾಡಿ ಅದನ್ನು ಮಾಡಿ ಎಂದು ಹೇಳಿದ್ದೇವೆ. ತಮಗೆ ಗೊತ್ತಿದೆ ಈ ಜಿಲ್ಲಾ ಪಂಚಾಯತ್ ಸದಸ್ಯರ ರಿಸರ್ವೇಷನ್ ಅನುಸರಿಸುವಾಗ ಯಾವ ತೊಂದರೆ ಆಗಿಲ್ಲ. ತಾವು ಎಲ್ಲರೂ ಅದನ್ನು ಕುಳಿತುಕೊಂಡು ಮಾಡಿದ್ದೀರಿ. ಇದನ್ನು ಉದ್ದೇಶ ಪೂರ್ವಕವಾಗಿ ಒಂದು ಪಕ್ಷಕ್ಕೆ, ಒಬ್ಬ ವ್ಯಕ್ತಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಆ ಗೈಡ್‌ಲೈನ್ ಅಲ್ಲ ಆ ಒಂದು ವಿಷಯ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರೇ ಹೇಳಿದರು ಇಲ್ಲಿ ಯಾವ ಒಂದು ಶಾಸಕರಿಗೆ ಅಥವಾ ಯಾರಿಗೂ ಸಹಾಯ ಮಾಡುವ ಭಾವನೆ ಇಲ್ಲ, ಡಿಸಿಗೆ ಡಿಸ್ಕ್ರಿಷನ್ ಇಲ್ಲ ಎಂದು ಹೇಳಿದರು. ಅವರಿಗೆ ಡಿಸ್ಕ್ರಿಷನ್ ಇಲ್ಲ ಎಂದರೆ ಆ ಪ್ರಶ್ನೆಯನ್ನು ಯಾವ ರೀತಿ ಸಾಲ್ವ್ ಮಾಡುತ್ತಾರೆ? ಅದು ಪಂಚಾಯತಿಗಳಲ್ಲಿ ನಾನು ಕೇಳಿದ ಹಾಗೆ ರಿಸರ್ವೇಷನ್ ಎಸ್ಸಿಗೆ 3 ಪಂಚಾಯತಿಗಳಲ್ಲಿ ಆಗಬೇಕು. ಆರು ಪಂಚಾಯತಿಗಳಲ್ಲಿ ಇಬ್ಬಿಬ್ಬರು ಆರಿಸಿ ಬಂದಿದ್ದಾರೆ. ಏನು ಮಾಡಬೇಕು?

ಶ್ರೀ ಎಂ.ವೈ. ಘೋರ್ಪಡೆ : ಆ ಸಂದರ್ಭದಲ್ಲಿ ಮಾತ್ರ ಡಿಸ್ಕ್ರಿಷನ್ ಇದೆ.

ಶ್ರೀ ಆರ್.ವಿ. ದೇಶಪಾಂಡೆ : ಡಿಸ್ಕ್ರಿಷನ್ ಎಕ್ಸರ್‌ಸೈಸ್ ಮಾಡುವಾಗ ಯಾವ ಪ್ರಕಾರ ಮಾಡಬೇಕು, ಶಾಸಕರನ್ನು ಕೇಳಿ ಮಾಡಬೇಕು ಎಂದು ಮಾಡಿದ ಹಾಗೆ ಆಯಿತಲ್ಲ. ಸರ್ಕಾರದ ಪರವಾಗಿ ತಾವು ಕೇಳಿ ಮಾಡಬೇಕು ಎಂದು ಮಾಡಿದ ಹಾಗೆ ಆಯಿತಲ್ಲ. ತಾವು ಏನು ಮೊದಲು ಮಾಡಿದ್ದೀರಲ್ಲ ಅದರಲ್ಲಿ ಕೆಲವು ಟೆಕ್ನಿಕಲ್ ಡಿಫಿಕಲ್ಟೀಸ್ ಇತ್ತು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇವತ್ತು ನೀವು ಬ್ಲ್ಯಾಂಕೆಟ್ ಆಗಿ ನಿಮ್ಮ ಸದಸ್ಯರ ಸಂಖ್ಯೆ ಜಾಸ್ತಿ ಇದೆ. ಅಂತ ಹೇಳಿ ಸರ್ಕಾರದ ಮನಸ್ಸಿನಲ್ಲಿ ಏನಿದೆ ಆ ಪ್ರಕಾರ ರಿಸರ್ವೇಷನ್ ಮಾಡಬೇಕು ಎಂದು ಆ ಉದ್ದೇಶದಿಂದ ಮಾಡಿದ್ದೀರಾ?

ಶ್ರೀ ಎಂ.ವೈ. ಘೋರ್ಪಡೆ : ಆ ಪ್ರಕಾರ ಇಲ್ಲ. ನಮ್ಮ ಶಾಸಕರನ್ನು ಕೇಳಿ ಅವರು ಯಾವ ರೀತಿ ಹೇಳುತ್ತಾರೋ ಆ ರೀತಿ ಮಾಡಬೇಕೆಂದು ನಾವು ಎಲ್ಲೂ ಹೇಳಿಲ್ಲ. ಅದು ನಮ್ಮ ಉದ್ದೇಶವೂ ಅಲ್ಲ. ಡಿಸ್ಕ್ರಿಷನ್ ಪವರ್ ಡಿ.ಸಿ.ಯವರಿಗೆ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಒಂದು ಸಮಸ್ಯೆ ಇದೆ. ಉದಾಹರಣೆಗೆ ಹೇಳುವುದಾದರೆ ನಾಲ್ಕು ಗ್ರಾಮ ಪಂಚಾಯತಿಗಳಲ್ಲಿ ಇಬ್ಬಿಬ್ಬರು ಎಸ್.ಸಿ.ಗಳು ಸಮವಾಗಿರುತ್ತಾರೆ ಅಂತ ಇಟ್ಟುಕೊಳ್ಳಿ ಆ ಸಮಯದಲ್ಲಿ ಡಿ.ಸಿ.ಯವರು ಯಾವುದೇ

ಶಾಸಕರ ಮಾತನ್ನು ಕೇಳದೇ ಲಾಟರಿ ಮೂಲಕ ಆಯ್ಕೆ ಮಾಡುವ ಅಧಿಕಾರ ಕೊಡುತ್ತೀರಾ? ಇನ್ನು ಎರಡನೆಯದಾಗಿ, ಯಾವುದೇ ಒಂದು ಅಧ್ಯಕ್ಷರ ಚುನಾವಣೆ ಆದ ಮೇಲೆ ಆ ಅಧ್ಯಕ್ಷರನ್ನೇ ನೋ ಕಾನ್ಫಿಡೆನ್ಸ್ ಮೋಷನ್ ಮುಖಾಂತರ ನಾವು ಇಳಿಸಬಹುದು. ಉದಾಹರಣೆಗೆ ಹೇಳುವುದಾದರೆ ಒಬ್ಬನೇ ಒಬ್ಬ ಎಸ್.ಟಿ. ಇರುತ್ತಾನೆ. ಅವನನ್ನು ಕೆಳಗೆ ಇಳಿಸಿದ ಮೇಲೆ ಇನ್ನೊಬ್ಬನನ್ನು ಅಧ್ಯಕ್ಷನನ್ನಾಗಿ ಮಾಡಲು ಎಸ್.ಟಿ. ಯಾರೂ ಇಲ್ಲ. ಅವನು ಉಪಾಧ್ಯಕ್ಷನಾಗುತ್ತಾನೆ. ಈ ಗೊಂದಲಕ್ಕೆ ತಾವು ಏನು ಪರಿಹಾರ ಹುಡುಕಿದ್ದೀರಿ? ಏನು ಸೂಚನೆ ಕಳುಹಿಸಿಕೊಟ್ಟಿದ್ದೀರಿ?

ಶ್ರೀ ಎಂ.ವೈ. ಘೋರ್ಪಡೆ : ಮೊದಲನೆಯ ಪ್ರಶ್ನೆಗೆ ಉತ್ತರ ಎಂದರೆ ಡಿ.ಸಿ.ಗೆ ಸಂಪೂರ್ಣವಾದ ಡಿಸ್ಕ್ರಿಷನ್ ಇದೆ. ಅವರು ಯಾವುದೇ ಮುಲಾಜಿನ ಮೇಲೆ ಮಾಡಬೇಕಾದದ್ದಿಲ್ಲ. 5-6 ಪಂಚಾಯತಿಗಳಲ್ಲಿ ಎಲ್ಲಿ ಮಾಡಬೇಕೆಂಬುದು....

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿ ರಾಜಕೀಯ ಪ್ರವೇಶ ಏತಕ್ಕೆ. ಪಕ್ಷಗಳ ಹೆಸರಿನಲ್ಲಿ ಚುನಾವಣೆ ಮಾಡಬೇಕೇ?

(ಗೊಂದಲ)

ಶ್ರೀ ಸಿ. ಬೈರೇಗೌಡ : ಗೈಡ್‌ಲೈನ್ಸ್ ಪ್ರಕಾರ ಮಾಡಿ. ಡಿಸ್ಕ್ರಿಷನರಿ ಪವರ್ ಬೇಡವೇ ಬೇಡ.

ಅಧ್ಯಕ್ಷರು : ಈ ಪ್ರಶ್ನೆಯನ್ನು ನಾನು ಅರ್ಧ ಗಂಟೆ ಚರ್ಚೆಗೆ ಕನ್ವರ್ಟ್ ಮಾಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟುಬಿಟ್ಟರೆ ಈಗಲೇ ಇದು ಇತ್ಯರ್ಥವಾಗುತ್ತದೆ. ಇದು ಬಹಳ ಪ್ರಮುಖವಾದ ಪ್ರಶ್ನೆ.

ಅಧ್ಯಕ್ಷರು : ನಿಮಗೆ ನಾನು ಅವಕಾಶವನ್ನು ಕಲ್ಪಿಸಿಕೊಡುತ್ತೇನೆ. ಉಳಿದಿರತಕ್ಕ ಪ್ರಶ್ನೆಗಳನ್ನು ನಾವು ಮುಗಿಸಬೇಕಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಅರ್ಧಗಂಟೆ ಕಾಲದ ಚರ್ಚೆಗೆ ಅವಕಾಶ ಕೊಡುತ್ತೀರಾ? ಈಗ ಸಾಧ್ಯವಾದರೇ ಈಗಲೇ ಉತ್ತರ ಕೊಟ್ಟು ಬಿಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಮಹತ್ವದ್ದಿದೆ. ಇದನ್ನು ಜಿಲ್ಲಾಧಿಕಾರಿಗಳ ಕೈಗೆ ಕೊಟ್ಟರೆ, ಇದರಲ್ಲಿ ಯಾವುದೇ ಸೂತ್ರವಿಲ್ಲದೇ ಇರುವುದರಿಂದ ಅವರ ಮನಸ್ಸಿಗೆ ಬಂದಂತೆ ಮಾಡಿಕೊಂಡು ಹೋಗಿ ಬಿಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜಿಲ್ಲಾಧಿಕಾರಿಗಳ ಮೇಲೆ ಶಾಸಕರು ಪ್ರಭಾವ ಬೀರುತ್ತಾರೆ. ಮತ್ತೆ ಅಲ್ಲಿ ರಾಜಕಾರಣ ಬರುತ್ತದೆ. ಹಿಂಬಾಗಿಲಿನಿಂದ ಪಕ್ಷ ಪ್ರವೇಶವಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ : ಯಾವುದನ್ನೇ ಮಾಡಿದರೂ ಅದಕ್ಕೆ ಒಂದು ಟೀಕೆ ಬಂದೇ ಬರುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹಾಗಾದರೆ ಲಾಟರಿ ಮೂಲಕ ಮಾಡಿ.

ಶ್ರೀ ಎಂ.ವೈ. ಘೋರ್ಪಡೆ : ಎಷ್ಟೋ ಕಡೆ ನಾವು ಲಾಟರಿ ಮೂಲಕ ಮಾಡಿದೆವು. ಜಿಲ್ಲಾ ಪರಿಷತ್ ಸದಸ್ಯರನ್ನು ಮಾಡುವಾಗ ಲಾಟರಿ ಸಿಸ್ಟಂನ್ನು ಮಾಡಿದೆವು. ಆಗ ಡಿ.ಸಿ.ಯವರು ಹೋಗಿ ಎಲ್ಲರನ್ನೂ ಕನ್ಸಲ್ಟ್ ಮಾಡಿದರು.....

(ಗೊಂದಲ)

ಶ್ರೀ ಶಿವಾನಂದ ಹೆಚ್.ಕೌಜಲಗಿ : ಬೆಳಗಾಂನ ಡೆಪ್ಯೂಟಿ ಕಮಿಷನ್ರವರು ಮಾಡಿಲ್ಲ.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಾವು ಹೇಳಿದಾಗ ಕಲ್ಲಗುಂಡಿನಂತೆ ಕುಳಿತಿದ್ದರು. ನಾನು ಮಾಡುತ್ತೇನಪ್ಪ, ಏನೂ ಕಾಳಜಿ ಮಾಡಬೇಡಿ ಅಪ್ಪ ಎಂದು ಹೇಳಿದರು. ಅವರು ಹೆಳಿದ್ದನ್ನೆಲ್ಲಾ ಬಸವಣ್ಣನಂತೆ ಕೇಳಿಕೊಂಡು ಕುಳಿತೆವು.....

ಶ್ರೀ ಎಂ.ವೈ. ಘೋರ್ಪಡೆ : ನನ್ನ ವಾಕ್ಯವನ್ನು ಮುಗಿಸುವುದಕ್ಕಾದರೂ ಅವಕಾಶ ಕೊಡಿ. ನಾನು ಏನು ಹೇಳುತ್ತಿದ್ದೇನೆಂದರೆ, ಏನು ನಡೆದಿದೆ ಅದನ್ನು ಹೇಳುತ್ತಿದ್ದೇನೆ. ಎಲ್ಲೆಲ್ಲಿ ಸರ್ವಾನುಮತದಿಂದ ಮಾಡುವುದಕ್ಕೆ ಸಾಧ್ಯವಾಯಿತು ಅಲ್ಲಿ ಮಾಡಿದೆವು. ಎಲ್ಲಿ ಮಾಡಲಿಕ್ಕಾಗಲಿಲ್ಲ ಅದನ್ನು ಹೇಳುತ್ತಿದ್ದೇನೆ. ಸೆಂಡೂರಿನಲ್ಲಿ ಲಾಟರಿ ಮೂಲಕ ಎತ್ತಿದ್ದಾರೆ. ಏಕೆಂದರೆ, ಎಲ್ಲಿ ಎರಡು ಅಭಿಪ್ರಾಯ ಬಂತು ಅಲ್ಲಿ ತೀರ್ಮಾನ ಮಾಡುವುದಕ್ಕೆ ಲಾಟರಿ ಎತ್ತಿದ್ದಾರೆ. ಎಲ್ಲ ಕಡೆ ಲಾಟರಿ ಎತ್ತಿಲ್ಲ. ಎಲ್ಲಿ ಭಿನ್ನಾಭಿಪ್ರಾಯ ಬಂತು ಅಲ್ಲಿ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ಕಡೆ ಒಂದೊಂದು ನೀತಿ ಬೇಡ.

(ಗೊಂದಲ)

1.25 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಎಲ್ಲಿಯೂ ಲಾಟರಿ ಎತ್ತಿಲ್ಲ. ಇದಕ್ಕೆ ಸರ್ಕಾರದಿಂದ ಒಂದು ಹೊಸ ಸೂತ್ರವನ್ನು ಈ ಸದನದಿಂದ ಮಾಡೋಣ.

ಶ್ರೀ ಎಂ.ವೈ. ಘೋರ್ಪಡೆ : ನಾವು ಯಾವುದು ಮಾಡಿದರೂ ಕೂಡ ಅದಕ್ಕೆ ಒಂದು ತೊಂದರೆ ಉಂಟಾಗುತ್ತದೆ. ಆದಕಾರಣ ಲಾಟರಿ ಮಾಡಿದರೂ ಕೂಡ ಟೀಕೆ ಮಾಡಲಿಕ್ಕೆ ಆಸ್ಪದ ಇದೆ. ಆದಕಾರಣ ನಾವು ಯಾವುದಕ್ಕಾದರೂ ಒಂದಕ್ಕೆ ಒಪ್ಪಿಕೊಂಡು ಮುಂದಕ್ಕೆ ಹೋಗಬೇಕಾಗುತ್ತದೆ.

ಕೃಷಿ ಉತ್ಪಾದನೆಗಳ ರಫ್ತು

61-ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. *ರಾಜ್ಯದ ತೋಟಗಾರಿಕೆಯ ಉತ್ಪನ್ನಗಳನ್ನು ವಿದೇಶಕ್ಕೆ ರಫ್ತು ಮಾಡುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಆ. *ಹಾಗಿದ್ದಲ್ಲಿ ಈ ದಿಸೆಯಲ್ಲಿ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿರುವರು.*

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ. ಹೌದು.

ಆ. ರಾಜ್ಯದ ತೋಟಗಾರಿಕೆ ಉತ್ತನ್ನಗಳನ್ನು ವಿದೇಶಕ್ಕೆ ರಫ್ತು ಮಾಡಲು ಸರ್ಕಾರವು ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿರುತ್ತದೆ.

1. ಬೆಂಗಳೂರು ಮತ್ತು ಮೈಸೂರು ಸುತ್ತಮುತ್ತ ಹೂ ಉತ್ಪಾದನೆ ಮತ್ತು ರಫ್ತು ಸಾಮರ್ಥ್ಯ ಹಾಗೂ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಮಾವು ಉತ್ಪಾದನೆ ಮತ್ತು ರಫ್ತು ಸಾಮರ್ಥ್ಯ ತಿಳಿಯಲು ತಾಂತ್ರಿಕ ಆರ್ಥಿಕ ಸರ್ವೇಕ್ಷಣೆ ನಡೆಸಲು ಕ್ರಮ ತೆಗೆದುಕೊಳ್ಳಲಾಗಿದೆ.